6115635
04/07/2023

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ರಾಜ್ಯದಲ್ಲಿ 2023-24ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಲ್ಲಿ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ (RWBCIS) ಅನುಷ್ಠಾನ ಸಂಬಂಧ ಕ್ಲಸ್ಟರ್ ವಾರು ವಿಮಾ ಸಂಸ್ಥೆಗಳನ್ನು ನಿಗದಿಪಡಿಸುವ ಬಗ್ಗೆ.

ಓದಲಾಗಿದೆ:

1. Government Order No: DH 844 HGM 2015, Bengaluru Dt:18.01.2016
2. GoI model tender Document No: 13015/03/2018-Credit-II Dt:08.04.2020
3. ಕೇಂದ್ರ ಸರ್ಕಾರದ PMFBY ಅನುಷ್ಠಾನ ಮಾರ್ಗಸೂಚಿ (Revamped Guideline) :13015/03/2018-Credit II, Published on 24th July 2020
4. ದಿನಾಂಕ:06-02-2023 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ ಬೆಳೆ ವಿಮೆ ಸಮನ್ವಯ ಸಮಿತಿ ಸಭೆಯ ನಡವಳಿಗಳು No:JDA(CI)/SLCCCI/36/2022-23 ದಿನಾಂಕ: 10-02-2023
5. Cluster wise Tender No:DH/JDH(HeG-PMU)/AHO(CI)/01/2023-24 Date:07-03-2023
6. No:DH/JDH(HeG-PMU)/AHO(CI)/01/2023-24 Date:09-03-2023
7. GoK UO Note No: CS 08 SCM 2023 di:18-04-2023
8. District wise Tender No:DH/JDH(HeG-PMU)/AHO(CI)/01/2023-24 Date:19-05-2023
9. ತೋಟಗಾರಿಕೆ ನಿರ್ದೇಶಕರ ಪತ್ರ ಸಂಖ್ಯೆ: ತೋಇ:ತೋಜಂನಿ(ತೋಇಅ-ಯೋನಿಘ)/ಸತೋಅ(ಬೆವಿ)/01/2023-24 ದಿ:13-06-2023

********

ಪ್ರಸ್ತಾವನೆ:

ಕೇಂದ್ರವಲಯ ಯೋಜನೆಯಾದ ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆ [Pradhan Mantri Fasal Bima Yojana (PMFBY)] ಹಾಗೂ ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಗಳನ್ನು [Restructured Weather Based Crop Insurance Scheme (RWBCIS)] 2016-17 ನೇ ಸಾಲಿನ ಮುಂಗಾರಿನಿಂದ ಮೇಲೆ ಓದಲಾದ (3) ರ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಅನುಷ್ಠಾನಗೊಳಿಸಲಾಗುತ್ತಿದೆ. ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆಯನ್ನು ಕೃಷಿ ಇಲಾಖೆ ಮತ್ತು ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯನ್ನು ತೋಟಗಾರಿಕೆ ಇಲಾಖೆ ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಗಳನ್ನು ಮೇಲೆ ಓದಲಾದ (2) ಕೇಂದ್ರ ಸರ್ಕಾರದ ಮಾರ್ಗಸೂಚಿಯ Section-IV ರಲ್ಲಿನ ಹಾಗೂ ಮೇಲೆ ಓದಲಾದ (3) ರ ಕಂಡಿಕೆ 7.1.2 ರಲ್ಲಿನ ಮಾರ್ಗಸೂಚಿಯನ್ವಯ ಕೇಂದ್ರ ಸರ್ಕಾರ ಎಂಪ್ಯಾನಲ್ ಮಾಡಿರುವ ಬೆಳೆವಿಮಾ ಸಂಸ್ಥೆಗಳಿಂದ ಇ-ಟೆಂಡರ್ ಆಹ್ವಾನಿಸಿ ವಿಮಾ ಕಂತಿನ ದರದ ಅತಿ ಕಡಿಮೆ ಬಿಡ್ (L1) ಸಂಸ್ಥೆಯನ್ನು ಆಯ್ಕೆ ಮಾಡಲಾಗುತ್ತಿದೆ. ಮುಂದುವರೆದು, ಈ ಯೋಜನೆಗಳನ್ನು ಅನುಷ್ಠಾನ ಮಾಡಲು ಮಾರ್ಗ ಸೂಚಿಯನ್ವಯ ಕಂಡಿಕೆ 7.1.1 ರನ್ವಯ ಕಂಪನಿಗಳನ್ನು ಮೂರು ವರ್ಷದ ಅವಧಿಗೆ ಆಯ್ಕೆ ಮಾಡಲಾಗುತ್ತದೆ.

ದಿನಾಂಕ:06-02-2023 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ ಬೆಳೆ ವಿಮೆ ಸಮನ್ವಯ ಸಮಿತಿ (SLCCCI) ಸಭೆಯಲ್ಲಿ ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ 2023-24, 2024-25 ಮತ್ತು 2025-26 ನೇ ಸಾಲುಗಳಿಗೆ ಹಸಿರುಮೆಣಸಿನಕಾಯಿ, ಹೂಕೋಸು, ಅಡಿಕೆ, ಕರಿಮೆಣಸು, ವಿಳ್ಯದೆಲೆ, ದ್ರಾಕ್ಷಿ, ದಾಳಿಂಬೆ, ನಿಂಬೆ, ಮಾವು, ಪರಂಗಿ ಮತ್ತು ಶುಂಠಿ ಬೆಳೆಗಳನ್ನು (ಒಟ್ಟಾರೆ-11 ಬೆಳೆಗಳು) ವಿವಿಧ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಮೇಲೆ ಓದಲಾದ (4) ರ ನಡವಳಿಯನ್ವಯ ತೀರ್ಮಾನಿಸಲಾಗಿರುತ್ತದೆ. ಕೇಂದ್ರ ಸರ್ಕಾರದ ಮಾರ್ಗಸೂಚಿಯ ಕಂಡಿಕೆ 13 ರಲ್ಲಿ ಕೇಂದ್ರ ಸರ್ಕಾರವು ನೀರಾವರಿ ಜಿಲ್ಲೆ (ಬಾಗಲಕೋಟೆ, ರಾಯಚೂರು, ಶಿವಮೊಗ್ಗ, ದಕ್ಷಿಣ ಕನ್ನಡ ಮತ್ತು ಮಂಡ್ಯ) ಗಳಿಗೆ ಶೇ. 25 ಮತ್ತು ಮಳೆ ಆಶ್ರಿತ ಜಿಲ್ಲೆಗಳಿಗೆ ಶೇ. 30 ರಷ್ಟು ಪ್ರೀಮಿಯಂ ಮಿತಿ ನಿಗದಿಪಡಿಸಿದೆ. ಇದಕ್ಕಿಂತ ಅಧಿಕ ಪ್ರೀಮಿಯಂ ನಮೂದಿಸಿದ ಜಿಲ್ಲೆ-ಬೆಳೆ ಸಂಯೋಜನೆಗಳನ್ನು ಅಧಿಸೂಚನೆಯಿಂದ ಕೈಬಿಡಬೇಕಾಗುತ್ತದೆ ಅಥವಾ ಹೆಚ್ಚುವರಿ ಪ್ರೀಮಿಯಂ ಅನ್ನು ರಾಜ್ಯಸರ್ಕಾರವು ಸಂಪೂರ್ಣವಾಗಿ ಭರಿಸಬೇಕಾಗಿರುತ್ತದೆ. ಮೇಲೆ ಓದಲಾದ (4) ರ ನಡವಳಿಯ ಅಜೆಂಡಾ ಸಂಖ್ಯೆ 7.5.A ರನ್ವಯ, ಕೇಂದ್ರ ಸರ್ಕಾರವು ನಿಗಧಿಪಡಿಸಿದ ಮಿತಿ ಮೀರಿದ ಮೊತ್ತವನ್ನು ರಾಜ್ಯ ಸರ್ಕಾರವು ಶೇಕಡಾ 10 ರವರೆಗೆ ಹೆಚ್ಚುವರಿ ಹೊರೆಯಾಗಿ ಭರಿಸಲು ಮತ್ತು 10% ಕ್ಕಿಂತ ಹೆಚ್ಚಿನ ಮೊತ್ತವನ್ನು ರೈತರು ಭರಿಸಲು ತೀರ್ಮಾನಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ತೋಟಗಾರಿಕೆ ನಿರ್ದೇಶಕರು ದಿನಾಂಕ:13.03.2023 ರಂದು ಪ್ರತಿ ಮೂರು ಜಿಲ್ಲೆಗಳಿಗೆ ಒಂದು ಕ್ಲಸ್ಟರ್ ನಂತೆ 10 ಪ್ರತ್ಯೇಕ ಕ್ಲಸ್ಟರ್‌ಗಳಿಗೆ ಇ-ಟೆಂಡರ್‌ಗಳನ್ನು ಮೇಲೆ ಓದಲಾದ (5) ರಲ್ಲಿ ಆಹ್ವಾನಿಸಿರುತ್ತಾರೆ. ಈ ಟೆಂಡರ್ ಪ್ರಕ್ರಿಯೆಯಲ್ಲಿ 9 ಕ್ಲಸ್ಟರ್ ಗಳಿಗೆ ಬಿಡ್ ಸಲ್ಲಿಕೆಯಾಗಿದ್ದು, 1 ಕ್ಲಸ್ಟರ್ ಗೆ ಸಲ್ಲಿಕೆಯಾಗಿರುವುದಿಲ್ಲ. ಟೆಂಡರ್ ಸಲ್ಲಿಕೆಯಾದ 9 ಕ್ಲಸ್ಟರ್‌ಗಳಲ್ಲಿ ಹಲವು ಜಿಲ್ಲಾ ಬೆಳೆ ಸಂಯೋಜನೆಗಳಿಗೆ ನಿಗಧಿಪಡಿಸಿದ ಪ್ರೀಮಿಯಂ ಮಿತಿಗಿಂತ (Cap) ಹೆಚ್ಚಿನ ಪ್ರೀಮಿಯಂ ದರ ನಮೂದಿಸಲಾಗಿತ್ತು. ಉಳಿದ 2 ಕ್ಲಸ್ಟರ್‌ಗಳಿಗೆ ತಲಾ ಒಂದು ಟೆಂಡರ್ ಸಲ್ಲಿಕೆಯಾಗಿತ್ತು. ಹೀಗಾಗಿ ಮರು ಟೆಂಡರ್ ಕರೆಯುವ ಅನಿವಾರ್ಯತೆ ಉಂಟಾಗಿ ದಿನಾಂಕ:03-05-2023 ರಂದು ಮರು ಟೆಂಡರ್ ಕರೆಯಲಾಗಿರುತ್ತದೆ. ಸದರಿ ಮರು ಟೆಂಡರ್ ನಲ್ಲಿಯೂ ಸಹ ಕ್ಲಸ್ಟರ್ 2 ಗೆ ಯಾವುದೇ ವಿಮಾ ಕಂಪನಿಯು ಭಾಗವಹಿಸಿವುದಿಲ್ಲ ಹಾಗೂ ಕ್ಲಸ್ಟರ್ 6 ಮತ್ತು 7 ರಲ್ಲಿ ಪ್ರೀಮಿಯಂ ಮಿತಿಗಿಂತ ಅಧಿಕ ಪ್ರೀಮಿಯಂ ನಮೂದಿಸಲಾಗಿರುತ್ತದೆ.

ಆರ್ಥಿಕ ಬಿಡ್ ತೆರೆಯಲಾದ ಎಲ್ಲಾ 9 ಕ್ಲಸ್ಟರ್ ಗಳನ್ನು ಪರಿಶೀಲಿಸಲಾಗಿ, ಹಲವು ಜಿಲ್ಲಾ-ಬೆಳೆ ಸಂಯೋಜನೆಗಳಲ್ಲಿ ಪ್ರೀಮಿಯಂ ದರಗಳು ಪ್ರೀಮಿಯಂ ಮಿತಿಗಿಂತ ಅಧಿಕವಾಗಿರುತ್ತವೆ. ಆದಕಾರಣ ಹೆಚ್ಚಿನ ಸಂಖ್ಯೆಯಲ್ಲಿ ಬಿಡ್ದುದಾರರನ್ನು ಆಹ್ವಾನಿಸಿ, ಸ್ಪರ್ಧಾತ್ಮಕ ಪ್ರೀಮಿಯಂ ದರಗಳನ್ನು ಪಡೆಯುವ ಉದ್ದೇಶದಿಂದ ಮೇಲೆ ಓದಲಾದ (8) ರನ್ವಯ ಎಲ್ಲಾ 31 ಜಿಲ್ಲಾ ಕ್ಲಸ್ಟರ್‌ಗಳಿಗೆ ಇ-ಟೆಂಡರ್ ಗಳನ್ನು ಆಹ್ವಾನಿಸಲಾಗಿತ್ತು. ಈ ಟೆಂಡರ್ ಪ್ರಕ್ರಿಯೆಯು 02-06-2023 ರಂದು ಮುಕ್ತಾಯಗೊಂಡಿದ್ದು, ಅಂತಿಮ ಹಂತವಾದ ಆರ್ಥಿಕ ಬಿಡ್ನನ್ನು ತೆರೆಯಲಾಯಿತು. ಈ ಬಿಡ್‌ಗಳನ್ನು ಪರಿಶೀಲಿಸಲಾಗಿ 31 ಜಿಲ್ಲಾ ಕ್ಲಸ್ಟರ್‌ಗಳಲ್ಲಿ 6 ಜಿಲ್ಲಾ ಕ್ಲಸ್ಟರ್‌ಗಳಿಗೆ ನಮೂದಿಸಲಾದ ಪ್ರೀಮಿಯಂ ದರಗಳು ಮಾರ್ಗಸೂಚಿಯ ಮಿತಿಯೊಳಗೆ ಇರುತ್ತವೆ. ಉಳಿದ 25 ಕ್ಲಸ್ಟರ್‌ಗಳಿಗೆ ಪ್ರೀಮಿಯಂ ದರ ಹೆಚ್ಚಾಗಿದ್ದು, ಸರ್ಕಾರದ ಮತ್ತು ರೈತರ ಮೇಲಿನ ಆರ್ಥಿಕ ಹೊರೆಯನ್ನು ಕಡಿಮೆ ಮಾಡುವ ಸಲುವಾಗಿ ಮರು ಟೆಂಡರ್ ಅನ್ನು ಕರೆಯುವ ಅನಿವಾರ್ಯತೆ ಉಂಟಾಗಿದೆ.

ಈ ಹಿನ್ನೆಲೆಯಲ್ಲಿ, ತೋಟಗಾರಿಕೆ ನಿರ್ದೇಶಕರು ಮಾರ್ಗಸೂಚಿಯನ್ವಯ ಒಪ್ಪಬಹುದಾದ 6 ಜಿಲ್ಲಾ ಕ್ಲಸ್ಟರ್‌ಗಳಿಗೆ ಅತೀ ಕಡಿಮೆ ಪ್ರೀಮಿಯಂ ದರ (L1) ನಮೂದಿಸಿರುವ ವಿಮಾ ಸಂಸ್ಥೆಗಳನ್ನು ಹಾಗೂ ವಿಮಾ ದರಗಳನ್ನು ಅನುಮೋದಿಸುವಂತೆ, ಮೇಲೆ ಓದಲಾದ (9) ರ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಈ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯು ಪರಿಶೀಲಿಸಿ ಟೆಂಡರ್‌ನ್ನು 3 ವರ್ಷಗಳ ಅವಧಿಯ ಬದಲು ಪ್ರಸಕ್ತ ಆರ್ಥಿಕ ವರ್ಷಕ್ಕೆ ಮಾತ್ರ ಅಂತಿಮಗೊಳಿಸಬೇಕು ಎಂದು ಸೂಚಿಸಿದೆ.

ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ತೋಇ 676 ತೋಇವಿ 2022 ಬೆಂಗಳೂರು**
**ದಿನಾಂಕ:04-07-2023**

1. ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದಲ್ಲಿ 2023-24ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಲ್ಲಿ ಮರುವಿನ್ಯಾಸಗೊಳಿಸಲಾದ ಹವಾಮಾನ ಅಧಾರಿತ ಬೆಳೆ ವಿಮಾ ಯೋಜನೆ (RWBCIS) ಅಡಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಪ್ರೀಮಿಯಂ ಮಿತಿಯೊಳಗಿರುವ ದಾವಣಗೆರೆ, ಉಡುಪಿ, ಕೋಲಾರ, ಹಾಸನ, ತುಮಕೂರು ಮತ್ತು ವಿಜಯಪುರ ಜಿಲ್ಲೆಗಳಿಗೆ ಅನುಷ್ಠಾನ ವಿಮಾ ಸಂಸ್ಥೆಗಳನ್ನು ಮತ್ತು L1 ವಿಮಾ ಕಂತಿನ ದರಗಳನ್ನು ಅನುಬಂಧ- 1 ರಲ್ಲಿ ಇರುವಂತೆ ಅನುಮೋದಿಸಿದೆ.

2. ಜಿಲ್ಲಾವಾರು ಅನುಷ್ಠಾನ ವಿಮಾ ಸಂಸ್ಥೆಗಳು ಕೆಳಗಿನಂತಿದೆ:

| ಜಿಲ್ಲೆಗಳು | ಅನುಷ್ಠಾನ ವಿಮಾ ಸಂಸ್ಥೆ |
|---|---|
| ದಾವಣಗೆರೆ | ಎಚ್ ಡಿ ಎಫ್ ಸಿ ಎರ್ಗೋ ಜನರಲ್ ಇನ್ಸುರೆನ್ಸ್ ಕಂಪನಿ (HDFC Ergo General Insurance Company) |
| ಉಡುಪಿ, ಕೋಲಾರ, ಹಾಸನ, ತುಮಕೂರು. ವಿಜಯಪುರ | ಅಗ್ರಿಕಲ್ಚರ್ ಇನ್ಸುರೆನ್ಸ್ ಕಂಪನಿ (Agriculture Insurance Company) |

3. ಈ 6 ಜಿಲ್ಲೆಗಳಲ್ಲಿ ರೈತರಿಂದ ಒಟ್ಟು ವಿಮಾ ಮೊತ್ತದ ಶೇಕಡಾ 5 ರಷ್ಟು ಮೊತ್ತವನ್ನು ಪಡೆದು ಬೆಳೆ ವಿಮೆಗೆ ನೊಂದಣಿ ಮಾಡಿಸಿಕೊಳ್ಳುವುದು.

4. ಅನುಷ್ಠಾನ ವಿಮಾ ಸಂಸ್ಥೆಗಳಿಗೆ ಪಾವತಿಸಬೇಕಾದ ವಿಮಾ ಮೊತ್ತದ ರಾಜ್ಯ ಪಾಲನ್ನು ಕೃಷಿ ಇಲಾಖೆಯ ಯೋಜನೆಯಾದ "ಹೊಸ ಬೆಳೆವಿಮೆ ಯೋಜನೆ "ಯ ಲೆಕ್ಕಶೀರ್ಷಿಕೆ:2401-00-110-0-07 ರಿಂದ ಕೃಷಿ ಇಲಾಖೆಯು ತೋಟಗಾರಿಕೆ ಇಲಾಖೆಗೆ ಒದಗಿಸಿ ಭರಿಸಲು ಅನುಮೋದಿಸಿದೆ.

5. ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯನ್ನು ಪ್ರಸಕ್ತ ವರ್ಷಕ್ಕೆ ಮಾತ್ರ ಮುಂದುವರಿಸುವುದು. ರಾಜ್ಯದ ಪಾಲು ಕೇಂದ್ರದ ಪಾಲಿಗಿಂತ ಗರಿಷ್ಠ ಶೇ.10 ರಷ್ಟಿರಬೇಕು ಎಂದು ಷರತ್ತನ್ನು ಪಾಲಿಸುವುದು.

6. ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ 213 ವೆಚ್ಚ-4/2023 ದಿನಾಂಕ:28.06.2023ರಲ್ಲಿ ಸಹಮತಿ ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಗುಡುದಪ್ಪ. ಎಂ.ಬಿ.)
ಪೀಠಾಧಿಕಾರಿ
(ಯೋಜನೆ, ಸ್ವೀಕೃತಿ ಮತ್ತು ರವಾನೆ ಶಾಖೆ)
ತೋಟಗಾರಿಕೆ ಇಲಾಖೆ

ಇವರಿಗೆ,

1. ಪ್ರಧಾನ ಮಹಾಲೇಖಪಾಲರು (ಎ&ಇ)/(ಜಿ&ಎಸ್.ಎಸ್.ಎ)/(ಇ&ಆರ್.ಎಸ್.ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.

2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್ ಬಾಗ್, ಬೆಂಗಳೂರು.
6. ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.
7. ನಿರ್ದೇಶಕರು (ಪಿಎಫ್‌ಡಿ), ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
8. ನಿರ್ದೇಶಕರು, ಕೆ.ಎಸ್.ಎನ್.ಡಿ.ಎಂ.ಸಿ, ಯಲಹಂಕ, ಬೆಂಗಳೂರು – (ನಿರ್ದೇಶಕರು ತೋಟಗಾರಿಕೆ ಇಲಾಖೆ ಮುಖಾಂತರ).
9. ಕನ್ವೀನರ್, ರಾಜ್ಯ ಮಟ್ಟದ ಬ್ಯಾಂಕರ್ ಗಳ ಸಮಿತಿ (SLBC), ಬೆಂಗಳೂರು
10. ವ್ಯವಸ್ಥಾಪಕ ನಿರ್ದೇಶಕರು, ಕೆ ಎಸ್ ಸಿ ಅಪೆಕ್ಸ್ ಬ್ಯಾಂಕ್, ಚಾಮರಾಜಪೇಟೆ, ಬೆಂಗಳೂರು
11. ಜಿಲ್ಲಾಧಿಕಾರಿಗಳು, ದಾವಣಗೆರೆ, ಉಡುಪಿ, ಕೋಲಾರ, ಹಾಸನ, ತುಮಕೂರು ಮತ್ತು ವಿಜಯಪುರ ಜಿಲ್ಲೆ– (ನಿರ್ದೇಶಕರು, ತೋಟಗಾರಿಕೆ ಇಲಾಖೆ ಮುಖಾಂತರ).
12. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ದಾವಣಗೆರೆ, ಉಡುಪಿ, ಕೋಲಾರ, ಹಾಸನ, ತುಮಕೂರು ಮತ್ತು ವಿಜಯಪುರ ಜಿಲ್ಲೆ ಜಿಲ್ಲಾ ಪಂಚಾಯತ್ - (ನಿರ್ದೇಶಕರು, ತೋಟಗಾರಿಕೆ ಇಲಾಖೆ ಮುಖಾಂತರ).
13. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಹಾಗೂ ತೋಟಗಾರಿಕೆ ಉಪ ನಿರ್ದೇಶಕರು - ದಾವಣಗೆರೆ, ಉಡುಪಿ, ಕೋಲಾರ, ಹಾಸನ, ತುಮಕೂರು ಮತ್ತು ವಿಜಯಪುರ ಜಿಲ್ಲೆ - (ನಿರ್ದೇಶಕರು, ತೋಟಗಾರಿಕೆ ಇಲಾಖೆ ಮುಖಾಂತರ).
14. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ದಾವಣಗೆರೆ, ಉಡುಪಿ, ಕೋಲಾರ, ಹಾಸನ, ತುಮಕೂರು ಮತ್ತು ವಿಜಯಪುರ ಜಿಲ್ಲೆ -(ನಿರ್ದೇಶಕರು, ತೋಟಗಾರಿಕೆ ಇಲಾಖೆ ಮುಖಾಂತರ).
15. ಎಲ್ಲಾ ಲೀಡ್ ಬ್ಯಾಂಕುಗಳು – (ಎಸ್.ಎಲ್.ಬಿ.ಸಿ. ಮುಖಾಂತರ).
16. ಎಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು- (ಅಪೆಕ್ಸ್ ಬ್ಯಾಂಕ್‌ನ ಮುಖಾಂತರ).
17. ಎಲ್ಲಾ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು –( ಎಸ್.ಎಲ್.ಬಿ.ಸಿ. ಮುಖಾಂತರ).
18. ಎಲ್ಲಾ ನೋಡಲ್ ಬ್ಯಾಂಕುಗಳು – (ಎಸ್.ಎಲ್.ಬಿ.ಸಿ. ಮುಖಾಂತರ).
19. ಪ್ರಾದೇಶಿಕ ವ್ಯವಸ್ಥಾಪಕರು, ಅಗ್ರಿಕಲ್ಚರ್ ಇನ್ಶೂರೆನ್ಸ್ ಕಂಪನಿ ಆಫ್ ಇಂಡಿಯಾ ಲಿಮಿಟೆಡ್, ಕರ್ನಾಟಕ ಪ್ರಾದೇಶಿಕ ಕಛೇರಿ, ಕರ್ನಾಟಕ ಪ್ರದೇಶ ಕೃಷಿಕ ಸಮಾಜ, ನಂ.18, 3ನೇ ಮಹಡಿ, ನೃಪತುಂಗ ರಸ್ತೆ, ಹಡ್ಸನ್ ವೃತ್ತ, ಬೆಂಗಳೂರು.
20. ವ್ಯವಸ್ಥಾಪಕ ನಿರ್ದೇಶಕರು, HDFC ಎರ್ಗೋ ಜನರಲ್ ಇನ್ಸುರೆನ್ಸ್ ಕಂಪನಿ.
21. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ -4), ಬೆಂಗಳೂರು.
22. ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ, ಬೆಂಗಳೂರು.
23. ಸರ್ಕಾರದ ಉಪ ಕಾರ್ಯದರ್ಶಿ, ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು.
24. ರಾಜ್ಯ ಮಟ್ಟದ ಬೆಳೆ ವಿಮಾ ಸಮನ್ವಯ ಸಮಿತಿಯ ಎಲ್ಲಾ ಸದಸ್ಯರಿಗೆ.
25. ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
26. ಮಾನ್ಯ ತೋಟಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
27. ಸರ್ಕಾರದ ಮುಖ್ಯ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
28. ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು.
29. ಸರ್ಕಾರದ ಅಪರ ಕಾರ್ಯದರ್ಶಿರವರ ಆಪ್ತ ಸಹಾಯಕರು, ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು.
30. ಕಂಪೈಲರ್, ಕರ್ನಾಟಕ ಗೆಜೆಟ್, ಬೆಂಗಳೂರು, ಇವರು ಇದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕ್ರಮ ತೆಗೆದುಕೊಳ್ಳುವುದು.

ಅನುಬಂಧ- 1

ಸರ್ಕಾರದ ಆದೇಶ ಸಂಖ್ಯೆ: ತೋಇ 676 ತೋಇವಿ 2022 ಬೆಂಗಳೂರು ದಿನಾಂಕ:04-07-2023

**ದಾವಣಗೆರೆ, ಉಡುಪಿ, ಕೋಲಾರ, ಹಾಸನ, ತುಮಕೂರು ಮತ್ತು ವಿಜಯಪುರ ಜಿಲ್ಲೆಗಳ ಬೆಳೆ-ಸಂಯೋಜನೆಗಳು L1 ಪ್ರೀಮೀಯಂ ದರ ಮತ್ತು ರೈತರ, ಕೇಂದ್ರ ಮತ್ತು ರಾಜ್ಯ ಪಾಲಿನ ವಿವರ**

| ಕ್ರ.ಸಂ. | ಜಿಲ್ಲೆ | ಹಂಗಾಮು | ಜಿಲ್ಲೆಗಳ ನೀರಾವರಿ ವಿಧ | ಬೆಳೆಗಳು | ಬೆಳೆಗಳ ನೀರಾವರಿ ವಿಧ (*Irr/RF/NS) | L1 _ ವಿಮಾ ಸಂಸ್ಥೆ | L1 _ ಪ್ರೀಮಿಯಂ ದರ (%) | ರೈತರ ಪಾಲಿನ ಪ್ರೀಮಿಯಂ ದರ (%) | ಕೇಂದ್ರ ಪಾಲಿನ ಪ್ರೀಮಿಯಂ ದರ (%) | ರಾಜ್ಯ ಪಾಲಿನ ಪ್ರೀಮಿಯಂ ದರ (%) |
|---|---|---|---|---|---|---|---|---|---|---|
| 1 | ದಾವಣಗೆರೆ | ಮುಂಗಾರು | ಮಳೆ ಆಶ್ರಿತ | ಅಡಿಕೆ | NS | ಎಚ್ ಡಿ ಎಫ್ ಸಿ ಎರ್ಗೋ ಜನರಲ್ ಇನ್ಸುರೆನ್ಸ್ ಕಂಪನಿ | 38.80 | 5.00 | 12.50 | 21.30 |
| 2 | ದಾವಣಗೆರೆ | ಮುಂಗಾರು | ಮಳೆ ಆಶ್ರಿತ | ವೀಳ್ಯದೆಲೆ | NS | | 30.00 | 5.00 | 12.50 | 12.50 |
| 3 | ದಾವಣಗೆರೆ | ಮುಂಗಾರು | ಮಳೆ ಆಶ್ರಿತ | ಮಾವು | NS | | 40.00 | 5.00 | 12.50 | 22.50 |
| 4 | ದಾವಣಗೆರೆ | ಮುಂಗಾರು | ಮಳೆ ಆಶ್ರಿತ | ಕರಿಮೆಣಸು | NS | | 40.00 | 5.00 | 12.50 | 22.50 |
| 5 | ದಾವಣಗೆರೆ | ಮುಂಗಾರು | ಮಳೆ ಆಶ್ರಿತ | ದಾಳಿಂಬೆ | NS | | 32.00 | 5.00 | 12.50 | 14.50 |
| 6 | ಉಡುಪಿ | ಮುಂಗಾರು | ಮಳೆ ಆಶ್ರಿತ | ಅಡಿಕೆ | NS | ಅಗ್ರಿಕಲ್ಚರ್ ಇನ್ಸುರೆನ್ಸ್ ಕಂಪನಿ (AIC) | 28.00 | 5.00 | 11.50 | 11.50 |
| 7 | ಉಡುಪಿ | ಮುಂಗಾರು | ಮಳೆ ಆಶ್ರಿತ | ಕರಿಮೆಣಸು | NS | | 25.00 | 5.00 | 10.00 | 10.00 |
| 8 | ಕೋಲಾರ | ಮುಂಗಾರು | ಮಳೆ ಆಶ್ರಿತ | ಮಾವು | NS | | 37.75 | 5.00 | 12.50 | 20.25 |
| 9 | ಹಾಸನ | ಮುಂಗಾರು | ಮಳೆ ಆಶ್ರಿತ | ಅಡಿಕೆ | NS | | 30.00 | 5.00 | 12.50 | 12.50 |
| 10 | ಹಾಸನ | ಮುಂಗಾರು | ಮಳೆ ಆಶ್ರಿತ | ಮಾವು | NS | | 30.00 | 5.00 | 12.50 | 12.50 |
| 11 | ಹಾಸನ | ಮುಂಗಾರು | ಮಳೆ ಆಶ್ರಿತ | ಕರಿಮೆಣಸು | NS | | 23.00 | 5.00 | 9.00 | 9.00 |
| 12 | ಹಾಸನ | ಮುಂಗಾರು | ಮಳೆ ಆಶ್ರಿತ | ದಾಳಿಂಬೆ | NS | | 30.00 | 5.00 | 12.50 | 12.50 |
| 13 | ತುಮಕೂರು | ಮುಂಗಾರು | ಮಳೆ ಆಶ್ರಿತ | ಅಡಿಕೆ | NS | | 19.00 | 5.00 | 7.00 | 7.00 |
| 14 | ತುಮಕೂರು | ಮುಂಗಾರು | ಮಳೆ ಆಶ್ರಿತ | ಮಾವು | NS | | 40.00 | 5.00 | 12.50 | 22.50 |
| 15 | ತುಮಕೂರು | ಮುಂಗಾರು | ಮಳೆ ಆಶ್ರಿತ | ಪಪಾಯ | NS | | 39.00 | 5.00 | 12.50 | 21.50 |
| 16 | ತುಮಕೂರು | ಮುಂಗಾರು | ಮಳೆ ಆಶ್ರಿತ | ದಾಳಿಂಬೆ | NS | | 25.00 | 5.00 | 10.00 | 10.00 |
| 17 | ವಿಜಯಪುರ | ಮುಂಗಾರು | ಮಳೆ ಆಶ್ರಿತ | ನಿಂಬೆ | NS | | 30.00 | 5.00 | 12.50 | 12.50 |
| 18 | ವಿಜಯಪುರ | ಮುಂಗಾರು | ಮಳೆ ಆಶ್ರಿತ | ದ್ರಾಕ್ಷಿ | NS | | 38.00 | 5.00 | 12.50 | 20.50 |
| 19 | ವಿಜಯಪುರ | ಮುಂಗಾರು | ಮಳೆ ಆಶ್ರಿತ | ದಾಳಿಂಬೆ | NS | | 30.00 | 5.00 | 12.50 | 12.50 |

* Irr - Irrigated, RF- Rainfed, NS - Not specified.

(ಗುಡುದಪ್ಪ. ಎಂ.ಬಿ.)
ಪೀಠಾಧಿಕಾರಿ
(ಯೋಜನೆ, ಸ್ವೀಕೃತಿ ಮತ್ತು ರವಾನೆ ಶಾಖೆ)
ತೋಟಗಾರಿಕೆ ಇಲಾಖೆ